doG-520
T.P-2

Reg No B G 155 2-8-72

55th Year of Publication 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವತಂತ್ರ
ಮಹೋತ್ಸವ
ಪೀಠಾರೋಹಿತ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಿಂಲಾ ಒಡೆಂಬಡಿಕೆಯಲ್ಲಿ ಕಾಶ್ಮೀರಕ್ಕೆ ರಿಯಾಯಿತಿ ಇಲ್ಲ

ಸಾಮೂಹಿಕ ಪ್ರತಿಭಟನೆ

ನವದೆಹಲಿ– ಸಿಮ್ಲಾ ಒಪ್ಪಂದದ ಬಗ್ಗೆ ತಮ್ಮ ಕೋಪ ತೋರಿಸಲು 40 ಸಾವಿರ ಜನಸಂಘ ಮತ್ತು ಸೋಷಲಿಸ್ಟು ಪಕ್ಷದ ಸ್ವಯಂಸೇವಕರು ರಾಮಲೀಲಾ ನಿವೇಶನದಿಂದ ಬೋಟ್ ಕ್ಲಬ್ ವರೆಗೆ ಭಾರಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

★

ಬೆಲೆ ಏರಿಕೆ

ನವದೆಹಲಿ — ಬೆಲೆ ಏರುತ್ತಿರುವದನ್ನು ಆರ್ಥ ಮಂತ್ರಿ ಶ್ರೀ ಚವ್ಹಣ್ ಲೋಕಸಭೆಯಲ್ಲಿ ಒಪ್ಪಿಕೊಂಡರು – ಮತ್ತು ಈಗಿನ ಪರಿಸ್ಥಿತಿಯ ಪ್ರಯೋಜನ ಪಡೆದುಕೊಂಡು ಅವಶ್ಯ ಪದಾರ್ಥಗಳ ಬೆಲೆ ಏರಿಸುವ ಡ್ರೋಹಿಗಳನ್ನು ಎಚ್ಚರಿಸಿದರು

★

ಸಂಶೋಧನೆ

ಮಂಡ್ಯ — ಇಲ್ಲಿಯ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಶ್ರೀ ತುಕೋಳ್‌ರವರು, ಕನ್ನಡ ಭಾಷೆ ಕನ್ನಡ ಸಾಹಿತ್ಯ ಬಗ್ಗೆ ಸಂಶೋಧನೆ ನಡೆಯಬೇಕೆಂದು ಹೇಳಿದರು.

ಶ್ರೀಮನ್ಮಹಾರಾಜರು

ಮೈಸೂರು — ಶ್ರೀಮನ್ಮಹಾರಾಜರು ಶ್ರೀ ಜಯಚಾಮರಾಜ ಒಡೆಯರವರ 54 ನೇ ಜನ್ಮದಿನೋತ್ಸವವು ನಿನ್ನೆ ನೆರವೇರಿತು – ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು – ಸಂಜೆ ಅರಮನೆಗೆ ದೀಪಾಲಂಕಾರ ಏರ್ಪಟ್ಟಿತ್ತು.

ಚಿನ್ನದ ನಾಣ್ಯಗಳು ಸಿಕ್ಕಿವೆ

ಗುಲ್ಬರ್ಗ— ಪಹಪುರ ತಾಲ್ಲೂಕಿನ ಗೌಡೂರು ಗ್ರಾಮದಲ್ಲಿ ಒಂದು ಮನೆ ಕಟ್ಟಲು ಪ್ರಾಯತ್ನಿಸುತ್ತಿದ್ದಾಗ 500 ಚಿನ್ನದ ನಾಣ್ಯಗಳು ಸಿಕ್ಕಿದವು.

ಪ್ರೇಮದ ಹುಚ್ಚು !

ಲಾಸೇಂಜಲ್ಸ್— ಮಿಚಿಗನ್ ವಿಶ್ವವಿದ್ಯಾನಿಲಯದ ಮ್ಯೂಜಿ ವಿದ್ಯಾರ್ಥಿ 20 ವರ್ಷದ ಸ್ಕಾಟ್ ತಾನು ಹಿಂದೆ ಒಂದು ಸಾರಿ ಕಂಡ, ತಾನು ಪ್ರೀತಿಸುವ ಮತ್ತು ಅನಳು ಯಾರೆಂದು ಗೊತ್ತಿಲ್ಲದ ಹುಡಗಿಗಾಗಿ 1600 ಡಾಲರುಗಳನ್ನು ಬಸ್ ಮೇಲಿನ ಜಾಹಿರಾತುಗಳಿಗಾಗಿ ಖರ್ಚು ಮಾಡಿರುವನು – ಹುಡುಗಿ ಇನ್ನೂ ಸಿಕ್ಕಿಲ್ಲ – ಅವನಲ್ಲಿದ್ದ ಹಣವೆಲ್ಲಾ ವ್ಯಯವಾಗಿದೆ !

ಅಭಾವ ಪರಿಸ್ಥಿತಿ ಎದುರಿಸಲು

ಬೆಂಗಳೂರು— ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಎದುರಿಸಲು ಸರಕಾರ ಕೂಡಲೇ ರೂ 1 ಕೋಟಿ ಮಂಜೂರ್ಮಾಡುವುದೆಂದು ಶಾಸನಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ತಿಳಿಸಿದರು.

ಕೇಂದ್ರದ ಸಹಾಯ ನಿರೀಕ್ಷೆ

ಬೆಂಗಳೂರು— ಈ ವರ್ಷದಲ್ಲಿ ಸಾಮೂಹಿಕ ನೀರು ಸರಬರಾಜು ಸ್ಕೀಂಗಳಿಗೆ ರಾಜ್ಯ ಸರ್ಕಾರವು ಕೇಂದ್ರದಿಂದ ರೂ 1 ಕೋಟಿ ನೆರವನ್ನು ನಿರೀಕ್ಷಿಸುತ್ತಿದೆಯೆಂದು ಸಣ್ಣಾಜ ಕಲ್ಯಾಣ ಮಂತ್ರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಶಾಸನಸಭೆಯಲ್ಲಿ ತಿಳಿಸಿದರು.

ಮಧ್ಯಯುಗದಲ್ಲಿಯೂ ದೇವರಿಗೆ ಪ್ರಾಣಾರ್ಪಣೆ ಇತ್ತು

ವಧುರ್ಪೆ— ರಾಮನಾಥಪುರದ ತಿರುಪತ್ತೂರುಪಟ್ಟಣದ ಪೊಮ್ಮಾಯಿತಿಮ್ಮನ ದೇವಾಲಯದಲ್ಲಿ ಸಿಕ್ಕಿರುವ ಅನುಶಾಸನದಿಂದ ಮಧ್ಯ ಯುಗದಲ್ಲಿಯೂ ಶಕ್ತಿ ದೇವತೆಗೆ ಪ್ರಾಣಾರ್ಪಣೆ ಮಾಡಿಕೊಳ್ಳುತ್ತಿದ್ದರೆಂಬುದು ತಿಳಿಯಬರುತ್ತದೆ.

ನಗರದಲ್ಲಿ ಚಳವಳಿ

ಮೈಸೂರು— ಜನಸಂಘದ ಇಲ್ಲಿಯ ಶಾಖೆಯು ಸಿಮ್ಲಾ ಒಪ್ಪಂದ ವಿರುದ್ಧ ತಾ|| 5 ರಿಂದ 2 ದಿನಗಳ ಚಳವಳ ನಡೆಸಲು ನಿರ್ಧರಿಸಿದೆ – ಪ್ರತಿಭಟನಾ ಮೆರವಣಿಗೆ, ಬಹಿರಂಗಸಭೆ, ಅನ್ನಸತ್ಯಾಗ್ರಹದ ಏರ್ಪಾಟಿದೆ – ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಲಾಗುವುದು

ಗಂಧದವೀರ ವಶ

ಮೈಸೂರು—ಮೈಸೂರಿನಿಂದ ಒಂದು ಲಾರಿಯಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ ರೂ 10000 ಬೆಲೆಯ ಗಂಧದವೀರ ಮರವೆನ್ನು ಅರಣ್ಯಾಧಿಕಾರಿಗಳು ವಶಪಡಿಸಿಕೊಂಡರು

ಕಾಶ್ಮೀರ ಬಗ್ಗೆ ರಿಯಾಯಿತಿ ಇಲ್ಲ

ನವದೆಹಲಿ— ಸಿಮ್ಲಾ ಒಪ್ಪಂದದಲ್ಲಿ ಭಾರತವು ಕಾಶ್ಮೀರ ಬಗ್ಗೆ ತನ್ನ ಸ್ಥಾನದಲ್ಲಿ ರಿಯಾಯಿತಿಗೆ ಅವಕಾಶ ಮಾಡಿಲ್ಲವೆಂದು ಲೋಕಸಭೆಯಲ್ಲಿ ವಿದೇಶವಿಚಾರ ಮಂತ್ರಿ ಶ್ರೀ ಸ್ವರ್ಣಸಿಂಗ್ ಹೇಳಿದರು.

★

ಹಸು ಕೊಳ್ಳಲು ಸಾಲ ನೀಡಿಕೆ

ಉತ್ತಮ ಹಸುಗಳನ್ನು ಕೊಳ್ಳುವದ ಕ್ಕಾಗಿ ವ್ಯವಸಾಯಗಾರರಿಗೆ ಸಾಲದ ರೂಪದಲ್ಲಿ ಹಣವನ್ನು ನೀಡಲು ಸರ್ಕಾರ ಉದ್ದೇಶಿಸಿದೆಯೆಂದು ಪಶು ಸಂಗೋಪನಾ ಖಾತೆಯ ರಾಜ್ಯಮಟ್ಟದ ಸಚಿವ ಶ್ರೀ ಎಸ್. ಚಿಕ್ಕೇಗೌಡರು ಇತ್ತೀಚೆಗೆ ಕೋಲಾರ ಜಿಲ್ಲೆಯ ಬನಹಳ್ಳಿಯಲ್ಲಿ ತಿಳಿಸಿದರು

★

ಜನಸಂಖ್ಯೆ

ನವದೆಹಲಿ — 1971 ರ ಜನಗಣತಿಯ ಪ್ರಕಾರ ಭಾರತದ ಜನಸಂಖ್ಯೆ 54.8 ಕೋಟಿ; 61-71 ರ ದಶಕದಲ್ಲಿ 10.8 ಕೋಟಿಯಷ್ಟು ಜನಸಂಖ್ಯೆ ಏರಿತು – ಎಂದರೆ ದಶಕದ ಜನಸಂಖ್ಯೆ 24.8 ರಷ್ಟು ಹೆಚ್ಚಿತು.

★

ಎರಡನೇ ತಾಜ್‌ಮಹಲ್ ಹೋಟಲು

ಬೊಂಬಾಯಿ— 22 ಅಂತಸ್ತಿನ ರೂ. 5.6 ಕೋಟಿ ಖರ್ಚಿನ ಎರಡನೇ ತಾಜ್ ಮಹಲ್ ಹೋಟಲು ಶನಿವಾರ ತೆರೆಯಲಾಯಿತು – ಇದ್ದರಲ್ಲಿ 650 ಕೊಠಡಿಗಳಿವೆ – ಇಲ್ಲಿ ಶಾಪ್ಪ್ ಹೇಳುವವರು, ಅಂಗಡಿಗಳು, ಆರೋಗ್ಯ ಕ್ಲಬ್, ಈಜುವಕೊಳ ಎಲ್ಲಾ ಇವೆ.

○ ಬೆಂಗಳೂರು— ತನ್ನ ವ್ಯಾವಾರ ಕ್ಕುಸಿದು ತುಂಬಾ ತೊಂದರೆಗೀಡಾದ ಶ್ರೀ ಚಂದ್ರಶೇಖರ್, ಆತನ ಪತ್ನಿ 5 ಮಕ್ಕಳು ಮೈಮೇಲಿನ ಬಟ್ಟೆಗೆ ಸೀಮೆಎಣ್ಣೆ ಚುಮಿಕಿಸಿಕೊಂಡು ಬೆಂಕಿಹತ್ತಿಸಿಕೊಂಡು ತೀವ್ರ ಸುಟ್ಟ ಸ್ಥಿತಿಯಲ್ಲಿ ಆಸ್ಪತ್ರೆಗೆ ಸ್ಥಾಗಿಸಲ್ಪಟ್ಟರು.

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ
ಹೊಟೇಲ್ ಬಿಲಾಲ್‌ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಲು ಒಪ್ಪಿರುವರೆಂದು ತಿಳಿಸಲು
ಹರ್ಷವಾಗುತ್ತದೆ
ಎಂ ಅಬ್ದುಲ್ ರಜಾಕ್, ಮಾಲೀಕರು

ಮಿಲಿಟರಿ ಖರ್ಚು

ನವದೆಹಲಿ— 1961 ರಿಂದ 1971 ರವರೆಗೆ ವಿಶ್ವದ ಮಿಲಿಟರಿ ಖರ್ಚು 1870 ಬಿಲಿಯ್ ಅಮೇರಿಕಾ ಡಾಲರುಗಳಷ್ಟಾಗಿದೆಯೆಂದೂ, ಅಭಿವೃದ್ಧಿಗೊಳ್ಳುತ್ತಿರುವ ದೇಶಗಳೂ ಆಯುಧಗಳಿಗಾಗಿ ಹೆಚ್ಚು ಖರ್ಚುಮಾಡುತ್ತಿವೆಯೆಂದೂ ಪ್ರಕಟವಾಗಿದೆ.

ಸಭಾಪರಿತ್ಯಾಗ

ಭೂಪಾಲ್ —ವಿಧಾನಸಭೆಯಲ್ಲಿ ರಾಜ್ಯದಲ್ಲಿಯ ಕ್ಷಾಮದ ಬಗ್ಗೆ ಚರ್ಚಿಸಬೇಕೆಂಬ ಸಲಹೆಯನ್ನು ಮುಖ್ಯ ಮಂತ್ರಿಗಳು ತಿರಸ್ಕರಿಸಿದ್ದರಿಂದ ಮಧ್ಯ ಪ್ರದೇಶದ ಶಾಸನಸಭೆಯಲ್ಲಿನ ಸೋಷಲಿಸ್ಟರು ಸಭಾಪರಿತ್ಯಾಗ ಮಾಡಿದರು.

ಮುಷ್ಕರ ನಿಂತಿತು

ಮೈಸೂರು — ಕೆಲವು ರಿಯಾಯಿತಿಗಾಗಿ ಮುಷ್ಕರ ನಡೆಸುತ್ತಿದ್ದ ಇಂಜಿನೀರಿಂಗು ವಿದ್ಯಾರ್ಥಿಗಳು ಕೆಲವರು ಪ್ರಭಾವವಂತರ ಒತ್ತಾಯ ಮತ್ತು ಭರವಸೆಯಿಂದ ಮುಷ್ಕರ ನಿಲ್ಲಿಸಿದರು.

ಜಿಲ್ಲಾ ಸಾಹಿತ್ಯ ಸಮ್ಮೇಳನ

ಮೈಸೂರು— ಮೈಸೂರು ಜಿಲ್ಲಾ ಸಾಹಿತ್ಯ ಸಮ್ಮೇಳನವು ಕೊಳ್ಳೇಗಾಲದಲ್ಲಿ ತಾ॥ 5–6 ರಲ್ಲಿ ನಡೆಯುವುದು.

ಸ್ತುತ್ಯ ಕಾರ್ಯ

ಮಡಕೇರಿ —ಸ್ಥಳೀಯ ವಿಶ್ವ ಹಿಂದೂ ಪರಿಷತ್ತು ಒಂದೂ ಆಸ್ಪತ್ರೆ ಕಟ್ಟಲಿದೆ – ಇಬ್ಬರು ಎರಡು ಎಕ್ರೆ ಭೂಮಿ ದಾನಾ ಮಾಡಿದಾರೆ.

ವುಡ್‌ಲ್ಯಾಂಡ್ 28-7-72ರಿಂದ ಅಮೋಘ 13ನೇವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರದು ನೋಡು

ಅಪೆರಾ 28 7 72 ರಿಂದ

ಫಿಲಂ ಲ್ಯಾಂಡ್ ತವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ: ಜಿತೇಂದ್ರ, ಬಬಿತ

ನಿರ್ದೇಶನ: ವಿಜಯಭಟ್ ಸಂಗೀತ: ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Help The Gorakshana

— Humanitarian Propoganda Monthly ....

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಆನೆ-ಹುಡುಗ

Quality Printing Neat Binding

Lakshminarasimha Press

Sivarampet, Mysore



Protect the Cow

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

ಛತ್ರಿ, ರೇನ್ ಕೋಟು, ಸೂಟು ಕೇಸು, ಹೋಲ್‌ಆಲ್, ಕಿಟ್ ಬಾಗ್‌ಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್, ಮೈಸೂರು.